**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.28/2013**

| | | |
|---|---|---|
| ಸಾಕ್ಷಿದಾರರ ಹೆಸರು | ಃ ದೇವರಾಯ ಕಾಮತ್ | ಫ್ರಾಸಾ -7 |
| ತಂದೆಯ ಹೆಸರು | ಃ ರಾಮಚಂದ್ರ ಕಾಮತ್ | ಚಾಸಾ-3 |
| ವಯಸ್ಸು | ಃ 70 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ –- | ದಿನಾಂಕಃ20.10.2023 |
| ವಾಸಸ್ಥಳ | ಃ ಕಳಸ | |

**ಮುಖ್ಯ ವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದಃ**

ಸಾಕ್ಷಿಯು ನಿಪಿ-6 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು.

ದಿ.20.02.2011 ರಂದು ಕಳಸಾದ ಮುಖ್ಯ ರಸ್ತೆಯಲ್ಲಿದ್ದ ನನ್ನ ಹಿಟ್ಟಿನ ಗಿರಣಿ ಪಕ್ಕದಲ್ಲಿದ್ದ ಚಾಸಾ-1 ರವರ ಶ್ರೀಲಕ್ಷ್ಮೀ ಜ್ಯುವೆಲರಿ ಅಂಗಡಿಯಲ್ಲಿ ಕಳ್ಳತನವಾದ ಬಗ್ಗೆ ಸ್ಥಳ ಮಹಜರ್ ಕಾಲಕ್ಕೆ ನಿಪಿ-6 ಕ್ಕೆ ಸಹಿ ಮಾಡಿರುತ್ತೇನೆ. ಆ ದಿನ ಪೋಲಿಸರು ನನ್ನ ಸಮಕ್ಷಮ ಸದರಿ ಅಂಗಡಿಯ ಬಾಗಿಲನ್ನು ತೆರೆದು ನೋಡಿದಾಗ 10 ಕೆ.ಜಿ.ಯಷ್ಟು ಬೆಳ್ಳಿ ಆಭರಣಗಳು ಮತ್ತು 500 ಗ್ರಾಂ ನಷ್ಟು ಚಿನ್ನದ ಆಭರಣಗಳು ಕಳುವಾಗಿದ್ದವು. ಅಂಗಡಿಯಲ್ಲಿ ಜೋಡಿಸಿಟ್ಟಿದ್ದ 10-12 ಬಾಕ್ಸ್ ಗಳು ಕಾಣೆಯಾಗಿದ್ದವು. ಮಹಜರ್ ಗೆ ಸಂಜೆಯ ಸಮಯದಲ್ಲಿ ಸಹಿ ಮಾಡಿದ್ದು ನನ್ನೊಂದಿಗೆ ಚಾಸಾ-2 ರವರು ಸಹಾ ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಸಾಕ್ಷಿಗೆ ನಿಪಿ-6 ರ ದಿಃ20.02.2011 ರ ಮಹಜರ್ ನ್ನು ಸಂಪೂರ್ಣವಾಗಿ ಓದಿ ಹೇಳಿದ್ದು, ಸಾಕ್ಷಿಯು ಮಹಜರ್ ನಲ್ಲಿ ಬರೆದಿರುವ ವಿಚಾರವನ್ನು ಸಂಪೂರ್ಣ ಒಪ್ಪಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.28/2013**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಅಬ್ದುಲ್ ಖಾದರ್ | ಪ್ರಾಸಾ -6 |
| ತಂದೆಯ ಹೆಸರು | ಃ ಸಾವನ್ನಾ | ಚಾಸಾ-2 |
| ವಯಸ್ಸು | ಃ 76 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ದಿನಸಿ ವ್ಯಾಪಾರ | ದಿನಾಂಕಃ20.10.2023 |
| ವಾಸಸ್ಥಳ | ಃ ಕಳಸ | |

**ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದಃ**

ಸಾಕ್ಷಿಯು ನಿಪಿ-6 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು.

ಕಳಸಾದ ಮುಖ್ಯ ರಸ್ತೆಯಲ್ಲಿರುವ ನನ್ನ ಅಂಗಡಿಯ ಎದುರು ಇರುವ ಚಾಸಾ-1 ರವರ ಲಕ್ಷ್ಮೀ ಜ್ಯುವೆಲರಿ ಅಂಗಡಿಯಲ್ಲಿ ಕಳ್ಳತನವಾದ ಬಗ್ಗೆ ದಿ.20.02.2011 ರಂದು ಸ್ಥಳ ಮಹಜರ್ ಕಾಲಕ್ಕೆ ನಿಪಿ-6 ಕ್ಕೆ ಸಹಿ ಮಾಡಿರುತ್ತೇನೆ. ಆ ದಿನ ಪೋಲಿಸರು ಕಳ್ಳತನವಾದ ಬಗ್ಗೆ ಸ್ಥಳವನ್ನು ಪರಿಶೀಲಿಸಿ ಚಾಸಾ-1 ರವರನ್ನು ವಿಚಾರಿಸಿ ಯಾವ ಯಾವ ವಸ್ತುಗಳು ಕಳ್ಳತನವಾದ ಬಗ್ಗೆ ವಿಚಾರಿಸಿರುತ್ತಾರೆ. ಯಾವ ಯಾವ ವಸ್ತುಗಳು ಕಳ್ಳತನವಾಗಿದೆ ಎಂದು ಈಗ ನನಗೆ ನೆನಪಿಲ್ಲ. ಆ ದಿನ ಮಹಜರ್ ಗೆ ನಾನು ಮತ್ತು ಚಾಸಾ-3 ರವರು ಸಹಿ ಮಾಡಿದ್ದೆವು. ಸಹಿ ಮಾಡುವಾಗ ಬೆ.10.00 ರಿಂದ 11.00 ಗಂಟೆಯಾಗಿರಬಹುದು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಸಾಕ್ಷಿಗೆ ನಿಪಿ-6 ರ ದಿಃ20.02.2011 ರ ಮಹಜರ್ ನ್ನು ಸಂಪೂರ್ಣವಾಗಿ ಓದಿ ಹೇಳಿದ್ದು, ಸಾಕ್ಷಿಯು ಮಹಜರ್ ನಲ್ಲಿ ಬರೆದಿರುವ ವಿಚಾರವನ್ನು ಸಂಪೂರ್ಣ ಒಪ್ಪಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.